ಕರ್ನಾಟಕ ವಿಧಾನಸಭೆ

KARNATAKA LEGISLATIVE ASSEMBLY

Thursday, 17th April 1975, (Chitra 27, 1897 Saka Era)

The House met in the Assembly Chamber, Vidhana Soudha, at Thirty Minutes past Eight of the Clock.

Madam Speaker (SMT. K. S. NAGARATHNAMMA) in the Chair.

OBITUARY REFERENCE

re : Demise of Sri S. Radhakrishnan Ex-President of India.

MADAM SPEAKER.—With profound regret I have to announce the demise of Dr. Sarvapalli Radhakrishna late last night. Dr. Radhakrishnan was an erudite scholar, a great statesman and philosopher. He adorned several offices with outstanding distinction. He was the first Ambassador of our country in U.S.S.R. He was Vice President and President of our country. Throughout his life he strived hard for achieving international peace. Above all, he was a giant among men.

† SRI D. DEVARAJ URS (Chief Minister) .—Madam Speaker, while associating ourselves with the sentiments expressed by you just now, we also wish to express our deep sorrow at the passing away of Dr. Sarvapalli Radhakrishnan, former President of India, who was universally regarded as a philosopher-statesman who embodied the noblest traditions of the Indian heritage. The nation awarded him its highest honour, "THE BHARAT RATNA", in recognition of his outstanding services in the fields of education, diplomacy and public life.

Dr. Radhakrishnan was a matchless orator whose purity of diction and deep rudition in the exposition of Indian philosophy and thought were recognised throught the world as an authentic exponent of India's values and traditions. After having been Vice-President,

---

*Asteriks Indicate that Remarks or speechs have not been revised by the member concerned.

he attained the highest office in the land and held it with dignity and distinction. The simplicity of his life combined with his unique scholarship won for him an imperishable niche in the history of India and in the hearts of the Indian people by whom he was regarded as a Rajaguru.

In his tragic demise, India has suffered an irrepairable loss but his memory will continue to be a source of inspiration. We pay our homage to an illustrious son of India whose many-sided contributions to the progress of India will be ever rememberd with gratitude and respect by the people of India.

† ಶ್ರೀ ಎಚ್. ಡಿ. ದೇವೇಗೌಡ (ಹೊಳೆನರಸೀಪುರ) .—ಮಾನ್ಯ ಅಧ್ಯಕ್ಷಣಿಯವರೇ, ತಾವು ಮತ್ತು ಮಾನ್ಯ ಮುಖ್ಯ ಮಂತ್ರಿಗಳು ಡಾ॥ ಸರ್ವಪಲ್ಲಿ ರಾಧಾಕೃಷ್ಣನ್ ಅವರ ನಿಧನದ ಬಗ್ಗೆ ಏನು ಸಂತಾಪ ನಿರ್ಣಯವನ್ನು ಮಂಡಿಸಿದ್ದೀರಿ ಅದರ ಸಂಬಂಧದಲ್ಲಿ ನಾನು ಕೂಡ ಧ್ವನಿಗೂಡಿಸುತ್ತೇನೆ. ರಾಜಕಾರಣಿ ಸಂತನಂತೆ ನಡೆದುಕೊಂಡ ಘಟನೆಗಳು ಇತಿಹಾಸದಲ್ಲಿ ಅಪೂರ್ವ ಈ ಬರಳೆದ ಪುಣ್ಯ ಗೆ ಸೇರಿದ್ದ ಡಾ॥ ಸರ್ವಪಲ್ಲಿ ರಾಧಾಕೃಷ್ಣನ್ ಅವರ ನಿಧನದಿಂದ ದಾರ್ಶನಿಕ ಜಗತ್ತಿಗೇ ವೇದಾಂತ ವಿದ್ವತ್ತಿಗೆ ಸಾತ್ವಿಕ ಜೀವನ ದರ್ಶನಗಳಿಗೆ ಉಂಟಾಗಿರುವ ಹಾನಿ ಬಹು ದೊಡ್ಡದು. ಡಾ॥ ರಾಧಾಕೃಷ್ಣನ್ ಅವರು ಹಳೆಯ ಮೈಸೂರಿನ ಜನಕ್ಕೆ ಅತ್ಯಂತ ಸಮೀಪರಾಗಿದ್ದರು. ನಮ್ಮಲ್ಲಿ ಎಷ್ಟೋ ಜನಕ್ಕೆ ಅಕ್ಷರದಾನ ಮಾಡಿದ ಗುರುಗಳಾಗಿದ್ದರು. ಶಿಕ್ಷಕರ ವೃತ್ತಿಯಿಂದ ಮೇಲೇರಿ ಉಪಕುಲಪತಿಗಳಾಗಿ ರಾಯಭಾರಿಗಳಾಗಿ ಭಾರತ ಸರ್ವೋಚ್ಚ ಪದವಿಯಿಂದ ರಾಷ್ಟ್ರಪತಿ ಪೀಠವನ್ನೂ ಅಲಂಕರಿಸಿದ ಈ ಮಹಾಮಹಿಮನ ನಿಧನದಿಂದ ಭಾರತಕ್ಕೆ ಎಷ್ಟೋ ಅಷ್ಟೇ ವಿಶ್ವಕ್ಕೂ ದುಃಖ ಸಂಗತಿ. ವಿಶ್ವವಿಖ್ಯಾತವಾದ ಗ್ರಂಥಗಳನ್ನು ರಚಿಸಿ ಭಾರತೀಯ ಧರ್ಮ ದರ್ಶನಗಳ ಪರಿಚಯವನ್ನೂ ವಿಶ್ವಕ್ಕೆ ಮಾಡಿಕೊಟ್ಟ ಈ ಮಹಾ ಮೇಧಾವಿ ಈ ಯುಗದ ಶ್ರೇಷ್ಠ ವಿದ್ವಾಂಸರಲ್ಲಿ ಒಬ್ಬರು. ಅವರ ನಿಧನ ಭಾರತೀಯರಾದ ನಮಗೆಲ್ಲಾ ಅತೀವ ದುಃಖದ ಸಂಗತಿ.

ತುಂಬು ಬಾಳ್ವೆ ನಡೆಸಿ, ಪೂರ್ಣ ಸಿದ್ಧಿಗಳಿಸಿ ಅಕ್ಷರಶಃ ಭಾರತರತ್ನರಂತೆ ಬಾಳಿದ ಮಹಾ ವ್ಯಕ್ತಿಯ ಅಡಿಗೆ ನಮ್ಮ ಭಕ್ತಿಪೂರ್ವಕ ನಮಸ್ಕಾರಗಳು.

† ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).—ಮಾನ್ಯ ಸಭಾಧ್ಯಕ್ಷಣಿಯವರೇ ಭಾರತದೇಶ ಒಬ್ಬ ಮಹಾ ವ್ಯಕ್ತಿಯನ್ನು ಕಳೆದುಕೊಂಡಿದೆ. ಡಾ॥ ಸರ್ವಪಲ್ಲಿ ರಾಧಾಕೃಷ್ಣನ್ ಅವರ ಬಗ್ಗೆ ಯಾರೂ ಕೂಡ ಚಕಾರ ಎತ್ತಿ ಅವರ ಬಗ್ಗೆ ಯಾವುದೇ ಟೀಕೆಗಳನ್ನು ಮಾಡುವಂಥಾ ಪರಿಸ್ಥಿತಿ ಇಲ್ಲ. ಅವರು ನಮ್ಮ ದೇಶದಲ್ಲಿ ಅತಿ ಉನ್ನತ ಪದವಿಗೆ ಏರಿದ್ದರೂ ಸಹ ಅವರು ಬಹಳ ಸರಳ ಮೂರ್ತಿಯಾಗಿ ತಮ್ಮ ಪದವಿಯ ಗೌರವವನ್ನು ಕಾಪಾಡಿಕೊಂಡು ಬಂದಂತಹ ವ್ಯಕ್ತಿ. ಅಷ್ಟು ಮಾತ್ರವಲ್ಲ ಭಾರತ ಮತ್ತು ಹೊರಗಿನ ರಾಷ್ಟ್ರಗಳ ಜೊತೆಯಲ್ಲಿ ಏನು ಸಂಬಂಧವನ್ನು ವಿಸ್ತಾರ ಮಾಡಬೇಕು ಎಂದು ಆಗ ಪ್ರಧಾನಿಗಳಾಗಿದ್ದ ಶ್ರೀ ಪಂಡಿತ್ ಜವಹರಲಾಲ್ ನೆಹರೂ ಅವರು ಪ್ರಯತ್ನ ಮಾಡುವಾಗ ಆ ಸಂದರ್ಭದಲ್ಲಿ ಆ ಬಗ್ಗೆ ಬೆಂಬಲವನ್ನು ಕೊಡುವ ರೀತಿಯಲ್ಲಿ ಬಹಳವಾಗಿ ಶ್ರಮಿಸಿ ದುಡಿದಂತಹ ವ್ಯಕ್ತಿ ಮತ್ತು ಆ ಬಗ್ಗೆ ಎಲ್ಲಾ ರೀತಿಯ ಸಹಕಾರವನ್ನೂ ನೀಡಿದಂತಹ ವ್ಯಕ್ತಿ ಡಾ॥ ರಾಧಾಕೃಷ್ಣನ್ ಅವರು. ಮುಖ್ಯವಾಗಿ ಅವರು ಭಾರತ ಮತ್ತು ಸೋವಿಯಟ್ ರಷ್ಯಾ ಬಗ್ಗೆ ಮೈತ್ರಿ ಇರಬೇಕೆಂದು ಒತ್ತಾಯ ಮಾಡಿದಂತಹ ಮಹೋನ್ನತವಾದ ವ್ಯಕ್ತಿ. ಇಷ್ಟು ಮಾತ್ರವಲ್ಲ ಒಂದು ಚಾರಿತ್ರಿಕ ನಿದರ್ಶನ ಏನೆಂದರೆ ಎಷ್ಟೋ ಜನ ಮಹಾ ವ್ಯಕ್ತಿಗಳನ್ನು ಭೇಟಿ ಮಾಡಿದ್ದಾರೆ. ಯಾರೂ ಭೇಟಿ ಮಾಡದೆ ಇದ್ದಂತಹ ಸೋವಿಯಟ್ ರಷ್ಯದ ಸ್ಟಾಲಿನ್ ಅವರನ್ನು ಡಾ॥ ಸರ್ವಪಲ್ಲಿ ರಾಧಾಕೃಷ್ಣನ್ ಅವರು ಭೇಟಿ ಮಾಡಿದ್ದರು. ಇಂಥಾ ಅದ್ವಿತೀಯ ಮಹಾ ಮೇಧಾವಿ ವ್ಯಕ್ತಿಯನ್ನು ಭಾರತ ಪಡೆದಿರುವುದು ಸಂತೋಷದ ವಿಷಯ. ಇಂಥಾ ಅಪಾರವಾದ ಗೌರವವನ್ನು ಪಡೆದಂತಹ ವ್ಯಕ್ತಿಯನ್ನು ನಾವು ಇಂದು ಕಳೆದುಕೊಂಡಿದ್ದೇವೆ. ಇದರಿಂದ ನಮಗೆ ನಮ್ಮ ದೇಶಕ್ಕೆ ಅಪಾರ ನಷ್ಟವುಂಟಾಗಿದೆ. ಅವರು ವಿದ್ಯಾ ರಂಗದಲ್ಲಿಯೂ ಸಹ ಮಹೋನ್ನತವಾದ ಕಾರ್ಯಗಳನ್ನು ಸಾಧಿಸಿದ್ದಾರೆ. ಅಂಥವರನ್ನು ನಾವು ಇಂದು ಕಳೆದುಕೊಂಡಿದ್ದೇವೆ ಇದರಿಂದ ನಮಗೆ ನಮ್ಮ ದೇಶಕ್ಕೆ ತುಂಬಬಾರದ ನಷ್ಟವುಂಟಾಗಿದೆ. ಇದರಿಂದಾಗಿ ಅವರ ನಿಧನದ ಬಗ್ಗೆ ಸಂತಾಪವನ್ನು ಸೂಚಿಸಲು ಮಾನ್ಯ ಅಧ್ಯಕ್ಷಣಿಯವರು ಏನು ನಿರ್ಣಯವನ್ನು ಮಂಡಿಸಿದ್ದಾರೆ ಅದಕ್ಕೆ ನಾನು ನನ್ನ ಬೆಂಬಲವನ್ನು ಸೂಚಿಸುತ್ತೇನೆ.

MADAM SPEAKER —I once again associate myself with the sentiments expressed by the Hon. Leader of the House and the Hon. Leader of the Opposition and others. I shall convey the feelings of the House to the members of the bereaved family.

I request the members to stand in silence for two minutes as a mark of our respect to the deceased.

(*The House stood in silence for two minute's as a mark of respect to the departed soul*).

The House stands adjourned to meet again tomorrow at 8-30 A.M.

The House adjorned at Ten Minutes past Nine of the Clock to meet again at Thirty Minutes past Eight of the Clock on Friday the 18th April 1975.

WD 2577 —GPB— 550- 7 8-75